**ಎಸ್ ಸಿ ನಂ.49/2024** **PW.1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 10.06.2026**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

10. ಚಾಸಾ.2 ರಿಂದ 5 ರವರು ನನಗೆ ಸಂಬಂಧಿಕರು ಆಗಬೇಕು ಎಂದರೆ ನಿಜ. ನನಗೆ ನಿಪಿ.1 ದೂರಿನಲ್ಲಿ ಬರೆದಿರುವ ವಿಷಯಗಳು ಗೊತ್ತಿಲ್ಲ ಎಂದರೆ ನಿಜ. ಅದೇ ರೀತಿ ನಿಪಿ.2 ಕೃತ್ಯ ನಡೆದ ಸ್ಥಳದ ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿರುವುದಿಲ್ಲ ಎಂದರೆ ನಿಜ. ಆರೋಪಿ 2 ರಿಂದ 5 ರವರು ನಮ್ಮ ಗ್ರಾಮದವರು ಇರುತ್ತಾರೆ ಎಂದರೆ ನಿಜ. ನಮಗೂ ಮತ್ತು ಆರೋಪಿತರಿಗೂ ಈ ಮುಂಚೆ ಯಾವುದೇ ಘಟನೆ ಆಗಿರುವುದಿಲ್ಲ. ನಾನು ಈ ಮುಂಚೆ ಆರೋಪಿತರ ವಿರುದ್ಧ ಯಾವುದೇ ದೂರು ಕೊಟ್ಟಿರುವುದಿಲ್ಲ. ಚಾಸಾ.2 ರಿಂದ 3 ಮತ್ತು ನನಗೆ ಆರೋಪಿತರು ಈ ಮುಂಚೆ ಹಲ್ಲೆ ಮಾಡಿದ್ದು ಇರುವುದಿಲ್ಲ.

11. 1ನೇ ಆರೋಪಿ ನನಗೆ ಡ್ರ್ಯಾಗರ್ ನಿಂದ ಚುಚ್ಚಿದ್ದು ಇರುವುದಿಲ್ಲ. ಅದೇ ರೀತಿಯಾಗಿ ಸಾಕ್ಷಿದಾರರಾದ ಚಾಸಾ.2 ರಿಂದ 6 ರವರಿಗೆ ಆರೋಪಿತರು ಡ್ರ್ಯಾಗರ್ ನಿಂದ ಚುಚ್ಚಿದ್ದು ಇರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಮದ್ದೂರು – ತುಮಕೂರು ಹೆದ್ದಾರಿ ಬೆಟ್ಟದಾಸದೊಡ್ಡಿಗೆ ಹೋಗುವ ರಸ್ತೆ ಮೇಲೆ ಯಾವುದೇ ಮಹಜರ್ ಮಾಡಿದ್ದು ಇರುವುದಿಲ್ಲ. ನನ್ನನ್ನು ಮತ್ತು ಉಮೇಶನನ್ನು ಆರೋಪಿತರು ಮನೆಯಿಂದ ಎಳೆದುಕೊಂಡು ಬಂದು ಹಲ್ಲೆ ಮಾಡಿದ್ದು ಇರುವುದಿಲ್ಲ. ಅವರು ನಮ್ಮ ಮನೆಯಿಂದ ರಸ್ತೆಗೆ ಎಳೆದುಕೊಂಡು ಬಂದು ಹಲ್ಲೆ ಮಾಡಿದ್ದು ಇರುವುದಿಲ್ಲ.

12. ವಾಟರ್ ಟ್ಯಾಂಕ್ ಬಳಿ ಆರೋಪಿತರು ನನಗೆ ಮತ್ತು ಚಾಸಾ.2 ರಿಂದ 5 ರವರಿಗೆ ಡ್ರ್ಯಾಗರ್ ನಿಂದ ಹಲ್ಲೆ ಮಾಡಿದ್ದು ಇರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಬಟ್ಟೆಗಳನ್ನು ಅಮಾನತು ಮಾಡಿಕೊಂಡಿದ್ದು ಇರುವುದಿಲ್ಲ. ಆ ಸ್ಥಳದಲ್ಲಿ ನನ್ನ ಸಹಿ ಪಡೆದದ್ದು ಇರುವುದಿಲ್ಲ. ನಿಪಿ.3 ರಲ್ಲಿ ಇರುವ 10 ಫೋಟೋಗಳನ್ನು ಎಲ್ಲಿ

ತೆಗೆದಿದ್ದಾರೆ ಮತ್ತು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ಆಯುಧಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ಮುದ್ದೆ ಮಾಲು 1 ಮತ್ತು 2 / ಆಯುಧ ಮತ್ತು ಬಟ್ಟೆಗಳನ್ನು ನನ್ನ ಸಮಕ್ಷಮ ಸೀಲ್ ಮಾಡಿ ಅಮಾನತು ಪಡಿಸಿಕೊಂಡಿರುವುದಿಲ್ಲ.

13. ನಾನು ಹಿಂದಿನ ದಿನಾಂಕದಂದು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದು ಆ ರೀತಿ ಸಾಕ್ಷಿ ಹೇಳಬೇಕೆಂದು ಪೊಲೀಸರು ಹೇಳಿಕೊಟ್ಟಿರುತ್ತಾರೆ. ನಿಪಿ.1 ಮತ್ತು 2 ದಾಖಲೆಗಳ ಮೇಲೆ ನಾನು ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಸ್ಕೂಟರ್ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದೆ. ನನಗೂ ಮತ್ತು ಆರೋಪಿತರಿಗೂ ಯಾವುದೇ ಘಟನೆ ಆಗಿರುವುದಿಲ್ಲ. ನಾನು ಆರೋಪಿತರ ವಿರುದ್ಧ ದೂರು ಕೊಟ್ಟಿರುವುದಿಲ್ಲ. ನಾವು ಮತ್ತು ಆರೋಪಿತರು ಒಂದೇ ಗ್ರಾಮದವರು ಇರುತ್ತೇವೆ. ನಾವೆಲ್ಲರೂ ಅನ್ಯೋನ್ಯವಾಗಿ ಇರುತ್ತೇವೆ. ಆರೋಪಿತರು ನಮಗೆ ಮಾರಣಾಂತಿಕ ಹಲ್ಲೆ ಮಾಡಿದ್ದಾಗಲಿ ಅಥವಾ ಅವಾಚ್ಯ ಶಬ್ದಗಳಿಂದ ಬೈದಿದ್ದಾಗಲಿ, ಕೊಲೆ ಬೆದರಿಕೆ ಹಾಕಿದ್ದಾಗಲಿ, ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡಿದ್ದಾಗಲಿ ಮಾಡಿರುವುದಿಲ್ಲ.

**<u>ಮರು ವಿಚಾರಣೆಃ</u>**

14. ದಿನಾಂಕ 14.08.2025 ರಂದು ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿರುತ್ತೇನೆ ಎಂದರೆ ನಿಜ. ಆ ದಿನ ನ್ಯಾಯಾಲಯದ ಮುಂದೆ ಹೇಳಿದ ಸಾಕ್ಷಿ ನಿಜ ಇರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಹೇಳಿದ ಸಂಗತಿಗಳು ನಿಜ ಇರುತ್ತವೆ. ಈ ದಿನ ಪಾಟೀ ಸವಾಲಿನಲ್ಲಿ ನ್ಯಾಯಾಲಯದ ಮುಂದೆ ಹೇಳಿದ ವಿಷಯಗಳನ್ನು ದಿನಾಂಕ 14.08.2025 ರಂದು ಮುಖ್ಯ ವಿಚಾರಣೆ ಕಾಲಕ್ಕೆ ಹೇಳಲು ಯಾವುದೇ ಸಮಸ್ಯೆ ಇರಲಿಲ್ಲ. ಆರೋಪಿತರು ನಮ್ಮ ಊರಿನವರೇ ಇರುತ್ತಾರೆ ಎಂದರೆ ನಿಜ. ನಾವು ವಿಶ್ವಾಸದಲ್ಲಿ ಇರುತ್ತೇವೆ ಎಂದರೆ ನಿಜ. ದಿನಾಂಕ 14.08.2025 ರಂದು ನಾನು ನನ್ನ ಮುಖ್ಯ ವಿಚಾರಣೆ ಆದ ನಂತರ ಆರೋಪಿತರು ನನ್ನ ಮೇಲೆ ಪ್ರಭಾವ ಬೀರಿ ರಾಜಿ

ಮಾಡಿಕೊಂಡಿರುತ್ತೇವೆ ಎಂದರೆ ನಿಜ. ನಾವು ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದರಿಂದ ಆರೋಪಿತರ ಮಾತು ಕೇಳಿ ಈ ದಿನ ನ್ಯಾಯಾಲಯದ ಮುಂದೆ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಯಾವುದೇ ಗಾಯಾಳುವಿಗೆ ಅಪಘಾತದಿಂದ ಗಾಯವಾಗಿರುತ್ತದೆ ಎಂದು ಹೇಳಿರುವುದಿಲ್ಲ. ಆಸ್ಪತ್ರೆಯಲ್ಲಿ ವೈದ್ಯರ ಮುಂದೆ ಹಲ್ಲೆಯಿಂದ ಗಾಯವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈಗ ಪ್ರಕರಣವನ್ನು ರಾಜಿ ಮಾಡಿಕೊಂಡಿರುವುದರಿಂದ ಈ ದಿನ ನಾನು ಈ ಹಿಂದೆ ನುಡಿದಿದ್ದ ಸಾಕ್ಷಿಗೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ರಾಜಿ ಮಾಡಿಕೊಂಡಿರುತ್ತೇವೆ ಎಂದು ಹೇಳುತ್ತಾರೆ. ನಾವು ರಾಜಿ ಮಾಡಿಕೊಂಡ ವಿಷಯವನ್ನು ಗಾಯಾಳುಗಳಾದ ಫ್ರಾಸಾ.2, 3, 4 ಮತ್ತು ಸಾಕ್ಷಿದಾರರಾದ ಫ್ರಾಸಾ.5, 6, 13 ರವರಿಗೂ ತಿಳಿಸಿರುತ್ತೇವೆ ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ** ಏನು ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ.

**(ಮಧ್ವೇಶ ಡಬೇರ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.